Regd No B G. 155

Sri

22—10—1964

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

ಸತ್ಯವಾದಿ

ಸ್ಥಾಪಕರು:- ಅಂವಮನೆ ಸಿಂಸ್ಥೆದಾರ್ ಎಂ ವಿ. ಸುಬ್ಬಂತಯ್ಯರು [2'ನಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನ ಪೈ

Protect the Cow
ಗೋಸಂರಕ್ಷಣೆ ಮಾಡಿ

ಪೋಲೀಸು ಇನ್‌ಸ್ಪೆಕ್ಟರು ಯುಕ್ತಿಯಿಂದ ಪ್ರಾಣಿವಧೆ ತಪ್ಪಿತು

ಮಂಗಳಾಪುರ — ವಿಜಯದಶಮಿಯಂದು ಇಲ್ಲಿಗೆ 26 ಮೈಲಿ ದೂರದ ತ್ರಿಪುರಾಂತಕ ಕ್ಷೇತ್ರದಲ್ಲಿನ ತ್ರಿಪುರಸುಂದರಿದೇವಿಗೆ 300 ಕೋಣ ಮತ್ತು 50 ಮೇಕೆಗಳನ್ನು ಬಲಿ ಕೊಡಲು ಮಾಡಿದ್ದ ಏರ್ಪಾಡು ಪೋಲೀಸು ಇನ್‌ಸ್ಪೆಕ್ಟರು ಗೋವಿಂದಸ್ವಾಮಿಯವರ ಯುಕ್ತಿಯಿಂದ ತಪ್ಪಿತು : ಬಲಿಗಾಗಿ ಪ್ರಾಣಿಗಳನ್ನು ತಂದಿದ್ದವರಲ್ಲಿ ಯಾರು ಮೊದಲು ಬಲಿಕೊಡಬೇಕೆಂಬ ವಿಷಯದಲ್ಲಿ ಅವರಲ್ಲಿ ಜಗಳ ಹುಟ್ಟಿ ಗಲಭೆ ಪ್ರಾರಂಭವಾಗಲು ಇನಸ್ಪೆಕ್ಟರು ಅವರನ್ನು ಯುಕ್ತಿಯಿಂದ ಸಮಯಾವಧಾನಗೊಳಿಸಿ, ಬಲಿ ತಪ್ಪಿಸಿ, ಹಣ್ಣುಕಾಯಿ ಅರ್ಪಿಸುವಂತೆ ಮಾಡಿದರು.

ಕೈಶ್ಚೇವರಿಗೆ ಆಹ್ವಾನ

ಮೆಲ್ಬೋರ್ನ್ — ಅಮೇರಿಕಾ ಮತ್ತು ಆಸ್ಟ್ರೇಲಿಯಾಗಳಿಗೂ ಸೇರಿದ ಒಂದು 'ವಿನೋದ' ಉಪನ್ಯಾಸ ಪ್ರವಾಸಕ್ಕೆ ಆಹ್ವಾನಿಸಿ ಪ್ರಧಾನಿ ಕೈಶ್ಚೇವರಿಗೆ ಒಂದು ವೆಲ್ಬೋರ್ನ್ ಸಂಸ್ಥೆಯು ಆಹ್ವಾನವಿತ್ತ. ಅದಕ್ಕಾಗಿ 2 ಲಕ್ಷ ಡಾಲರುಗಳು ಕೊಡುವುದಾಗಿ ತಿಳಿಸಿದೆ.

★

ತಿರುಪತಿ — ವೈಸೂರು ಸರಕಾರವು ತಿರುಪತಿ ದೇವಸ್ಥಾನಕ್ಕೆ ಭೋಜರಾಜ ಮತ್ತು ಶುಕರ ಎಂಬ ಆನೆಗಳನ್ನು ಕೊಡಲು ನಿರ್ಧರಿಸಿದೆ

★

ಮದರಾಸು ರಾಜ್ಯದ ಎಲ್ಲಾ ರೈಲ್ವೇ ಸ್ಟೇಷನ್ನುಗಳಿಗೂ ರೈಲಿನಲ್ಲಿ ಭತ್ತ ಸಾಗಿಸುವುದನ್ನು ರೈಲ್ವೇ ಅಧಿಕಾರಿಗಳು ಪ್ರತಿಬಂಧಿಸಿರುವರು.

★

ನಾಳೆಯ ಪಂಚಾಂಗ

ವೈವಜ್ಞಶಿಖಾಮಣಿ
ಅಷ್ಟಾವಧಾನ ಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕಸಾಹ್ಯಪಕ್ಕ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರಿಂದ

23 ಶುಕ್ರವಾರ ಬದಿಗೆ-ತದಿಗೆ ಕೃತಿಕ

ಲೂಟಿ

ಭದ್ರಾವತಿ — ಭದ್ರಾವತಿ ರೈತ ಸಹಕಾರಿ ಸಂಘದಲ್ಲಿನ ಎಲ್ಲಾ ಅಕ್ಕಿ ಗೋಧಿ ಸಕ್ಕರೆ ಮತ್ತು ಫರ್ಟಿಲೈಜರಸ್ಸು ವೆಯಸ್ಟೆ ಗುಂಪು ಲೂಟಿಮಾಡಿತು — ಪೋಲೀಸರು ಅಶ್ರು ಪ್ರಹಾರ ಮಾಡಿದರು — ಸುಮಾರು 5000 ಮಂದಿಯ ಗುಂಪು ಮುನಿಸಿಪಲ್ ಆಫೀಸಿನ ಮೇಲೆ ಕಲ್ಲು ಹೊಡೆದರು ; 5 ಮಂದಿ ಗಾಯಗೊಂಡರು ; ಕೆಲವು ಮಂದಿ ಪೋಲೀಸರಿಗೂ ಸಣ್ಣಪುಟ್ಟ ಗಾಯಗಳಾದವು — ಕುಪಿತ ಗುಂಪಿಗೆ ಹೆದರಿ ಅಂಗಡಿಗಳೂ ಹೋಟಲುಗಳೂ ಮುಚ್ಚಲ್ಪಟ್ಟವು — ವಿಷಯು ತಿಳಿದೊಡನೆ ಸ್ಥಳಕ್ಕೆ ಸಪ್ಟೇಕಮಿಷನರು ಆಹಾರ ಸಂಬರಾಜಿನೊಡನೆ ಹೋದರು.

ಕೊಯಮುತ್ತೂರು — ಆಹಾರದ ಕೊರತೆ ಪರಿಸ್ಥಿತಿಗಾಗಿ ಡಿ ಎಂ ಕೆ ಹಿಂದಿ ವಿರುದ್ಧದ ಚಳವಳಿಯನ್ನು ಮುಂದಕ್ಕೆ ಹಾಕುವ ಸಂಭವವಿದೆಯೆಂದು ಪಾರ್ಟಿ ನಾಯಕ ಅಣ್ಣಾದುರೈ ಹೇಳಿದರು.

★

ಬೆಂಗಳೂರು ನೀಲಸಂದ್ರ ಬಜಾರು ಬೀದಿಯಲ್ಲಿನ ಅಗ್ಗದ ಅಂಗಡಿ ಮತ್ತು ಪಕ್ಕದ ಗೋಡೌನುಗಳಿಂದ ಪೋಲೀಸರು 24 ಟೀಲ ಅಕ್ಕಿಯನ್ನು ವಶಪಡಿಸಿಕೊಂಡರು.

ಇದೊಂದು ಹುಚ್ಚು

ನ್ಯೂಯಾರ್ಕ್ — ನ್ಯೂಯಾರ್ಕಿನಲ್ಲಿ ಮಾರಲುಗವ ಎಂಥಾ ಭೂಮಿಯನ್ನಾದರೂ ಕೊಳ್ಳುವುದು ಬ್ರೂಕ್ಲಿನಿನ ಒಬ್ಬ ಮಧ್ಯ ವ್ಯಾಪಾರಿ ಬೆನಸ್ಟೆಯ ಸೈಡಿನ ಹವ್ಯಾಸ ; ಈಚೆಗೆ ಕಂದಾಯ ಕೊಡದೆ ಹಂಚಾಜಾದ ಒಂದು ಭೂಮಿಯನ್ನು 25 ಡಾಲಾಗಳಿಗೆ ಕೊಂಡುಕೊಂಡನು ; ಅದು 100 ಅಡಿ ಉದ್ದವಿದ್ದರೂ ಅಗಲ ಕೇವಲ 11 ಅಂಗುಲ ; ಕೆಲವು ವರ್ಷಗಳ ಹಿಂದೆ ಅವನು ಕೊಂಡ ಒಂದು ಭೂಮಿಯು 200 ಅಡಿ ಉದ್ದವಾದರೂ ಅಗಲ ಕೇವಲ 3 ಅಡಿಗಳು !

★

ಯೋಚನೆ ಚೆನ್ನಾಗಿದೆ

1969 ರ ವೇಳೆಗೆ ಮಹಾತ್ಮಾ ಗಾಂಧಿ ಹುಟ್ಟಿದ ಶತಮಾನ ಜಯಂತಿ ವೇಳೆಗೆ ದೇಶದಲ್ಲಿ ಸೂಜಿಮಿಲಿಯ ಎಕರೆ ಭೂಮಿಗೆ ನೀರಾವರಿ ಮತ್ತು ನೂರು ಸಾವಿರ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸಂಬರಾಜಾಗಬೇಕೆಂದು ಡಾ|| ಕೆ ಎಲ್ ರಾವ್‌ರವರು 9 ನೇ ನೀರಾವರಿ ಮತ್ತು ವಿದ್ಯುಚ್ಛಕ್ತಿ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾಡಿದ ಭಾಷಣದಲ್ಲಿ ತಿಳಿಸಿದರು. ಈ ಸಮ್ಮೇಳನ ತಿರುವೇಂದ್ರಂನಲ್ಲಿ ಸೇರಿದೆ

★

ಕೃಷ್ಣಾ ಮತ್ತು ಗೋದಾವರಿ ನದಿ ನೀರು ಹಂಚಿಕೆಯ ಬಗ್ಗೆ ಈ ತಿಂಗಳು 29 ರಂದು ದೆಹಲಿಯಲ್ಲಿ ಆಂಧ್ರ, ಮೈಸೂರು ಹಾಗೂ ಮಹಾರಾಷ್ಟ್ರ ಪ್ರತಿನಿಧಿಗಳ ಸಮ್ಮೇಳನ ನಡೆಯುವುದು

★

ಚೀನಾ ಮಾಡಿದ ಅಣು ಬಾಂಬು ಪ್ರಯೋಗದಬಗ್ಗೆ ಭಾರತ ಹೆದರಬೇಕಾಗಿಲ್ಲವೆಂದೂ, ಭಾರತವು ಈಗ ಅಣು ಬಾಂಬು ತಯಾರಿಸುವುದಿಲ್ಲವೆಂದೂ ಪ್ರಧಾನಿ ಶಾಸ್ತ್ರಿಗಳು ಹೇಳಿದರು.

ವಿಶ್ವ ಸಂಸ್ಥೆ ದಿನಾಚರಣೆ

ವೈಸೂರು — ಪೌರಸಭೆಯು ಆಶ್ರಯದಲ್ಲಿ ಎಂದಿನಂತೆ ವಿಶ್ವಸಂಸ್ಥೆ ದಿನಾಚರಣೆಯು ತಾ || 24 ರಂದು ಟೌನ್‌ಹಾಲಿನಲ್ಲಿ ನಡೆಸಲಾಗುವುದೆಂದು ಪೌರಸಭಾಧ್ಯಕ್ಷರು ತಿಳಿಸಿದ್ದಾರೆ

★

ಗಾಬರಿಪಡಬೇಕಾಗಿಲ್ಲ

ನವದೆಹಲಿ — ನವದೆಹಲಿ — ಭಾರತದಲ್ಲಿ ಮೊನ್ನೆ ರಾತ್ರಿ ಹಠಾತ್ತನೆ ಆದ ಅಣ್ವಸ್ತ್ರಾಭ್ಯಾಸ ಶತನದ ಪ್ರಯೋಗದಲ್ಲಿ ವಿಕಿರಣ ಕಂಡುಬಂದಿದೆಯೆಂದು ವದಂತಿಯಾಗಿದೆ — ಇದಕ್ಕೆ ಗಾಬರಿ ಪಡಬೇಕಾಗಿಲ್ಲವೆಂದು ಅಣುಶಕ್ತಿ ಶಾಖಾ ಡಾ || ವಾಡಿಯಾ ಹೇಳಿದರು.

ಶಿವಮೊಗ್ಗ.... ತಾ || 18 ರಂದು ಇಲ್ಲಿನ ನಾಗರೀಕ ಸಮಿತಿ ಆಶ್ರಯದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಸಂಕಷ್ಟದ ಆಹಾರ ನೀತಿಯು ಕಟುವಾಗಿ ಟೀಕಿಸಲಾಯಿತು

ಬೆಂಗಳೂರು.... ಪಟಾಸು ಮತ್ತು ಆನೆ ಪಟಾಕಿ ಹತ್ತಿಸುವುದನ್ನು ಬೆಂಗಳೂರು ನಗರ ಹಲವಾಧಿಕಾರಿಗಳು ನಿಷೇಧಿಸಿ ಆಜ್ಞೆ ಹೊರಡಿಸಿದ್ದಾರೆ.

ಪಾರಿಸ್ಸು.... ಚೀನವನ್ನು ವಿಶ್ವಸಂಸ್ಥೆ ಮತ್ತು ಮತ್ತು ಅದರ ಅಂಗಸಂಸ್ಥೆಗಳಿಗೆ ಸೇರಿಸಿಕೊಳ್ಳಬೇಕೆಂದು ಭಾರತ ಒತ್ತಾಯ ಮಾಡಿದೆ

ಜಿನೀವಾ.... ಅಂತರಿಕ್ಷ ಸ್ಪರ್ಧೆಯಲ್ಲಿ ರಷ್ಯಾಕ್ಕಿಂತ ಅಮೇರಿಕಾ ಹಿಂದಿರುವುದೆಂದು ಅಂತರಿಕ್ಷ ಅಡಳಿತ ಮಂಡಲಿಯ ಜೇಮ್ಸ್ ವೆಬ್ ಹೇಳಿದರು.

ದೆಹಲಿಯಲ್ಲಿ ತಾ|| 26 ರಂದು ರಾಷ್ಟ್ರಗಳ ಆಹಾರ ಮಂತ್ರಿಗಳ ಸಭೆಯನ್ನು ಭಾರತದ ಆಹಾರಮಂತ್ರಿಯವರು ಕರೆಯುವರು

ಮಹಾತ್ಮಾ ಗಾಂಧಿಯವರ ಅಮೋಘ ನುಡಿಗಳು

★

.... 1891 ರಲ್ಲಿ ಗಾಂಧೀಜಿಯವರು ಹೀಗೆಂದಿದ್ದರು ....

ಭಾರತಕ್ಕೆ ಸ್ವಾತಂತ್ರ್ಯ ದೊರೆವ 56 ವರ್ಷಗಳ ಹಿಂದೆ ಗಾಂಧೀಜೀಯವ
ಬ್ಲೂಮ್ಸಬರಿ ಎಂಬಲ್ಲಿ ನಡೆದ ಶಾಖಾಹಾರಿಗಳ ಸಭೆಯಲ್ಲಿ ಓದಿದ ತದ್ಮ
ನಾಸ್ಯದಲ್ಲಿ ಹೀಗೆಂದಿದ್ದರು— ಭಾರತದಲ್ಲಿ ದಿನಕ್ಕೆ ಕೇವಲ ಕಾಲಾಣೆ (ಎ
ಪೈಸೆ) ಹಣ್ಣಲ್ಲಿ ಜೀವಿಸುವ ಎಲಿಯಾಂತರ ಜನರಿಯುವರು : ಈ ಬಡಜನರಿಗೆ
ಕ್ಕೊಂದೇ ಊಟ– ಎಂಗಟ್ಟಿಕೊಂದ ಚಪಾತಿ ಒಂದು, ಮತ್ತು ಭಾತ್ರ ತ
ಹೊರಿಸಿದ ಉಪ್ಪಿನ ಕಣಗಳಷ್ಟು ; ಭಾರತದಲ್ಲಿ ಎಲ್ಲರೂ ಶಾಖಾಹಾರಿಗ
ಭಾವನೆ ತಪ್ಪು : ಹಿಂದೂಗಳಲ್ಲಿ ಕೂಡ ಅನೇಕರು ಮಾಂಸಾಹಾರಿಗಳಾಗಿ
ರೆ ; ಆದರೆ ಅಧಿಕ ಸಂಖ್ಯಾಕರು ಶಾಖಾಹಾರಿಗಳು. (ವಂ. ಪ್ರ)

ಕೆಲವು ಭೌಗೋಳಿಕ ಉಪನಾಮಗಳು

1 ಪವಿತ್ರ ಭೂಮಿ— ಪೆಲಿಸ್ಟೈನ್
2 ಲವಂಗ ದ್ವೀಪ— ಜಾಂಜಿಬಾರ್
3 ಬಿಳಿಯರ ಗೋರಿ— ಆಫ್ರಿಕದ ಗಿನಿ ಕೋಸ್ಟ್
4 ಜಗತ್ತಿನ ಸಕ್ಕರೆ ಬಟ್ಟಲು— ಕ್ಯೂಬಾ
5 ನಿಶೇಧಿತ ನಗರ— ಲ್ಹಾಸಾ
6 ಚೀಣದ ಶೋಕ— ಹುವಾಂಗ್ಹೋ
7 ಸನಾತನ ನಗರ— ರೋಮ್
8 ಸಡುಂತ್ರಿಯ ಸೂರ್ಯನ ನಾಡು— ನೆವೇರ್ವೆ
9 ಯೂರೋಪಿನ ಆಟದ ರಂಗ— ಸ್ವಿಡ್ಜರ್ಲೆಂಡು
10 ಉದಯ ಭಾಸ್ಕರನ ನಾಡು— ಜಪಾನು
11 ಕಪ್ಪಲ ಖಂಡ— ಆಫ್ರಿಕ
12 ಭಾರತದ ವಾಹಾದ್ವಾರ— ಮುಂಬೈ
13 ಅಂಬುಸೆಗಳ ನಗರ— ಕಲ್ಕತ್ತ
14 ಸಹಸ್ರ ಸಂಖ್ಯೆಗಳ ನಾಡು— ಫಿನ್ಲೆಂಡು
15 ಬಂಗಾಳಾದ ಶೋಕ— ದಾಮೋದರ (ನದಿ)

ಸರಾ ಮನರಂಜನೆ, ಸಾಂಸ್ಕೃತಿಕ ಕಾರ್ಯಕ್ರಮ– ಎಗ್ಮಿಬಿಷನ್ನಿನಲ್ಲಿ

23 ರಂದು ಸಂಜೆ 6 ರಿಂದ 9 ರವರೆಗೆ ನಾಗಸ್ವರ, ಕಡಿವಜಾಲು, ನಾಟಕ

ಗೋರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

★

ನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ
ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ.

ಾ ವಾಯಿದೆ ಮುಗಿದಿರುವವರು ದಯವಾಡಿ ಪಾವತಿಮಾಡಬೇಕಾಗಿ ವಿನಂತಿ

ಾಯಕರ ಹೆಸರನ್ನು ಪತ್ರಿಕೆಯಲ್ಲಿ ಕೃತಜ್ಞತಾಪೂರ್ವಕ ಪ್ರಕಟಿಸಲಾಗುತ್ತೆ.
10 ಕ್ಕೆ ಮೇಲ್ಪಟ್ಟು ಕೊಟ್ಟವರಿಗೆ ' ಗೋರಕ್ಷಣ ' ಕಳುಹಿಸಲಾಗುತ್ತಿರುವುದು

ವಿಳಾಸ– ಗೋರಕ್ಷಣ ಆಫೀಸು ಚಾಮರಪುರಂ, ಮೈಸೂರು 4

ಪಿ ಎಸ್ ನಾರಾಯಣ್, ಶ್ರೀ ಪಿ ಎಸ್ ವಿಶ್ವನಾಥ್, ಜಯನಗರ, ಬೆಂಗಳೂರು
ಜಿ ಜಿ ಶಾಸ್ತ್ರಿಗಳು (ದ ರೈಲ್ವೆ) ವಿದ್ಯಾರಣ್ಯಪುರಂ, ಮೈಸೂರು
ಚನಂತನಾರಸಿಂಹಯ್ಯಂಗಾರ್, ಶಾಸ್ತ್ರಿ ಧರ್ಮ ಪ್ರಚಾರಸಭಾ, ಹೊಂಗನೂರು
ಷ್ಣ ಆಫೀಸು, ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು 4

ವುಡ್‌ಲಾಂಡ್ 23–10–64 ರಿಂದ
ಶಿಸ್ತು ಅಮೋಘ ಆರಂಭ
ವಹಿಡಾ ರಹಿಮ್ಸ್, ವಿಜಯಕುಮಾರ್, ಜಾನಿವಾಕರ್, ನಿರೂಪರಾಯ್
ಅಭಿನಯಿಸಿರುವ ಸುಂದರ ಹಿಂಡೀ ಚಿತ್ರ
ಕೌನ್ ಆಪ್ ಕೌನ್ ಪರಾಯ
ಸಂಗೀತ– ರವಿ [ದಿನವಹಿ 3 ಪ್ರದರ್ಶನಗಳು]

ಆಪೆರಾ— ಜಯಪ್ರದ 2 ನೇ ವಾರ
ಸುಂದರ ತಮಿಳು ಚಿತ್ರ [ದಿನ 3 ಆಟಗಳು]
ವೀರಾಂಗನೆ
ಪಾತ್ರ– ಜೆಮಿನಿ ಗಣೇಶ್, ಪದ್ಮಿನಿ, ರಾಗಿಣಿ, ಬಾಲಾಜಿ, ಸುಕುಮಾರಿ, ಅಶೋಕ್

ರಣಜಿತ್‌ನಲ್ಲಿ— ಜನಪ್ರಿಯ 3 ನೇ ವಾರ
– ಮನರಂಜಕ, ಬೋಧಪ್ರದ, ಆಕರ್ಷಣೀಯ ಕೌಟುಂಬಿಕ ಕನ್ನಡ ಚಿತ್ರ –
ಸಕಲರೂ ನೋಡಿ ಆನಂದಿಸಬೇಕಾದ ಅಶ್ಯಮೋಘ ಕಲಾಕೃತಿ
ಮುರಿಯದ ಮನೆ [ಕನ್ನಡ]
ರಾಜಕುಮಾರ್, ಉದಯಕುಮಾರ್, ಅಶ್ವತ್ಥ್, ಬಾಲಕೃಷ್ಣ, ನರಸಿಂಹರಾಜು
ಪಂಡರೀಬಾಯಿ, ಜಯಂತಿ ಮುಂತಾದವರು ಪಾತ್ರಧಾರಿಗಳು
ನಿರ್ದೇಶನ : ವೈ. ಆರ್. ಸ್ವಾಮಿ, ಎಂ. ಎ.
4 ವಾರಗಳು ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಿದೆ
ಪ್ರತಿ ದಿನ 3 ಆಟಗಳು — ಕರ್ನಾಟಕ ಫಿಲ್ಮ್ಸ್ ಹಂಚಿಕೆ

SHAKTI
SUDHA
Superb Tonic

Help The ' Gorakshana'
" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ
ವಾರ್ಷಿಕ ಚಂದಾ 50 ನ ಪೈ
' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamaraj ouram, Mysore 4